International Journal of Kannada Research
www.kannadajournal.com

ISSN: 2454–5813
IJKR 2018; 4(3): 225-227
© 2018 IJKR
www.kannadajournal.com
Received: 10-05-2018
Accepted: 11-06-2018

**ಡಾ. ಸುನೀಲ ಜಾಬಾದಿ**
Gulbarga University,
Kalaburagi, Karnataka State
Guest Lecturer, Basava Degree
College, Kalaburagi, Karnataka,
India

**Correspondence**
**ಡಾ. ಸುನೀಲ ಜಾಬಾದಿ**
Gulbarga University,
Kalaburagi, Karnataka State
Guest Lecturer, Basava Degree
College, Kalaburagi, Karnataka,
India

# ಕೃಷಿ ಕ್ಷೇತ್ರಕ್ಕೆ ಡಾ.ಬಿ.ಆರ್. ಅಂಬೇಡ್ಕರ್‌ರವರ ಕೊಡುಗೆ

**ಡಾ. ಸುನೀಲ ಜಾಬಾದಿ**

## ಪೀಠಿಕೆ

ವಿಶ್ವಜ್ಞಾನದ ಸಂಕೇತವಾದ ಡಾ. ಬಿ. ಆರ್. ಅಂಬೇಡ್ಕರ್‌ರವರು ಈ ದೇಶದ ಶ್ರೇಷ್ಠ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಪರಿವರ್ತನ ಚಿಂತಕರಾಗಿ, ಮತ್ತು ರಾಜಕೀಯ ಚತುರ ಮುತ್ಸದ್ಧಿಯಾಗಿ, ಸಂವಿಧಾನದ ತಜ್ಞರಾಗಿ, ಕಾನೂನು ನಿಪುಣರಾಗಿ, ಇವರೊಬ್ಬ ವಿಶ್ವಮಟ್ಟದ ಹಾಗೂ ಭಾರತದ ಶ್ರೇಷ್ಠ ಆರ್ಥಿಕ ತಜ್ಞರಲ್ಲಿ ಅಗ್ರಮಾನ್ಯ ಸ್ಥಾನವನ್ನು ಹೊಂದಿದ್ದಾರೆ. ಇವರು ಕೇವಲ ಸಾಮಾಜಿಕ, ಧಾರ್ಮಿಕ, ರಾಜಕೀಯ ತಜ್ಞರಾಗಿರದೆ ವಿಶ್ವಮಟ್ಟದ ಆರ್ಥಿಕ ವಿದ್ವಾಂಸರಾಗಿ, ಆರ್ಥಿಕತೆಗೆ ಸಂಬಂಧಿಸಿದಂತೆ ಅನೇಕ ಚಿಂತನಾ ತತ್ವಗಳು ಮತ್ತು ವಿಚಾರ ಧಾರೆಗಳು ನೀಡುವುದರ ಜೊತೆಗೆ ಆರ್ಥಿಕ ಕ್ಷೇತ್ರದಲ್ಲಿ ಸೃಷ್ಟಿಗೊಳ್ಳುವ ಸಮಸ್ಯೆಗಳಿಗೆ ಪರಿಹಾರ ಚಿಕಿತ್ಸಾ ನೀಡಿದ್ದಾರೆ.

ಈ ದೇಶದ ನೆಲಕ್ಕೆ ಅಂಟಿರುವ ಅಸಮಾನತೆಯು, ಕಳಂಕ ಅಂಧಕಾರ, ಅಂದಶ್ರದ್ಧೆ, ಮೂಢನಂಬಿಕೆ, ಅಂತಹ ಅನೇಕ ಸಮಸ್ಯೆಗಳನ್ನು ವೈದಿಕ ಪರಂಪರೆಯಿಂದಲೇ ಹುಟ್ಟಿಕೊಂಡಿವೆ. ಇವುಗಳಿಗೆ ಅಸಮಾನತೆ, ಅನೀತಿ–ಅಧರ್ಮ, ಅನ್ಯಾಯ ಎಂಬ ಕಟ್ಟು ಪಾಡುಗಳನ್ನು ಲೇಪನ ಮಾಡುವುದರ ಮೂಲಕ ಇಲ್ಲಿನ ಸನಾತನಿಯ ಚರಿತ್ರೆ ಇದೆ. ಹೀಗಾಗಿ ಈ ಎಲ್ಲಾ ಸಮಸ್ಯೆಗಳು ಕೇವಲ ಸಾಮಾಜಿಕ ನೆಲೆಯನ್ನು ಮಾತ್ರ ಹೊಂದಿರುವುದಿಲ್ಲ. ರಾಜಕೀಯ ಮತ್ತು ಧಾರ್ಮಿಕ ಸಮಸ್ಯೆಗಳನ್ನು ತಳಮಟ್ಟದಲ್ಲಿ ಆಧಾರವಾಗಿಟ್ಟುಕೊಂಡು ರೂಪಗೊಂಡಿವೆ. ಅದರಲ್ಲೂ ಪ್ರಮುಖವಾಗಿ ಆರ್ಥಿಕ ಸಮಸ್ಯೆ ಬಹುಮುಖವಾದ ಪಾತ್ರವಹಿಸುತ್ತದೆ. ಡಾ. ಅಂಬೇಡ್ಕರ್‌ರರು ಭಾರತ ದೇಶದ ಅಸಮಾನತೆ, ಅಂಧಾಕಾರ, ಮೌಢ್ಯ ಎನ್ನುವ ನಂಬಿಕೆಯ ಬೇರು ಸಹಿತ ಕಿತ್ತು ಹಾಕಬೇಕಾದರೆ ಸೂಕ್ಷ್ಮ ಮತ್ತು ಗಂಭೀರವಾಗಿ ಆಲೊಚಿಸಿದ್ದಾಗ ಆರ್ಥಿಕ ಕ್ಷೇತ್ರವು ಬಹಳ ಪ್ರಮುಖವಾದ ಮತ್ತು ಮಹತ್ವ ಪೂರ್ಣವಾದ ಕ್ಷೇತ್ರವಾಗಿದೆ ಎಂದು ಅರಿತುಕೊಂಡಿದ್ದರು. ಡಾ. ಬಿ.ಆರ್.ಅಂಬೇಡ್ಕರ್‌ರವರೆ ಹೇಳಿರುವ ಹಾಗೆ 'ಭಾರತೀಯ ಸಮಾಜಕ್ಕೆ ಅಂಟಿಕೊಂಡಿರುವ ಮಹಾ ಜಾಢ್ಯವಾದ ಜಾತಿ ಪದ್ಧತಿಯನ್ನು ತೊಲಗಿಸದೆ ಆರ್ಥಿಕ ಸ್ವಾತಂತ್ರ್ಯ ಸಾದಿಸಲಾಗದು, ಆರ್ಥಿಕ ಸ್ವಾತಂತ್ರ್ಯ ಗಳಿಸದಿದ್ದರೆ ರಾಜಕೀಯ, ಸ್ವಾತಂತ್ರ್ಯ ಅರ್ಥ ಹೀನವಾಗುತ್ತದೆ' ಎಂಬುವುದು ಇವರ ವಾದವಾಗಿತ್ತು. ಆದ್ದರಿಂದ ಇವರು ಈ ದೇಶದ ಆರ್ಥಿಕ ವ್ಯವಸ್ಥೆಯ ಬಗ್ಗೆ ಸುದೀರ್ಘವಾಗಿ ಅಧ್ಯಯನ ಮಾಡಿ ಇಲ್ಲಿರುವ ಅರ್ಥಿಕ ಅಸಮಾನತೆಗೆ ಕಾರಣಗಳು ಹಾಗೂ ಪರಿಹಾರ ಮಾರ್ಗ ಕಂಡುಕೊಂಡು ಆರ್ಥಿಕ ಬದಲಾವಣೆಗಾಗಿ ಅನೇಕ ಹೋರಾಟ ಮತ್ತು ಯೋಜನೆಗಳನ್ನು ರೂಪಿಸುವುದರ ಮೂಲಕ ವಿಶ್ವದ ಬಹುದೊಡ್ಡ ಆರ್ಥಿಕ ಚಿಂತಕರಾಗಿ ಹೊರಹೊಮ್ಮಿದ್ದಾರೆ.

## ಕೃಷಿಕ್ಷೇತ್ರ

ಇಂದು ನಾವು ಬೆಳಗಾದರೆ ಸಾಕು ದಿನಾ ನಿತ್ಯ ಮಾಧ್ಯಮಗಳಲ್ಲಿ ಬರುವ ಸುದ್ದಿಗಳನ್ನು ಓದಿದ್ದಾಗ ರೈತರ ಆತ್ಮಹತ್ಯ ಹಾಗೂ ಸಾಲಕ್ಕಾಗಿ ಹೆದರಿ ನೇಣು ಹಾಕಿಕೊಂಡ ಪ್ರಕರಣಗಳು ನೋಡಿದ್ದಾಗ ಡಾ.ಬಿ.ಆರ್.ಅಂಬೇಡ್ಕರ್‌ರವರ ಚಿಂತನೆಯಲ್ಲಿ ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ಅನೇಕ ಗಂಭೀರತೆಯ ಮಹತ್ವ ಪೂರ್ಣವಾದ ವಿಷಯ ಮತ್ತು ವಿಚಾರಧಾರೆಗಳನ್ನು ಹೊರತರುವ ಅನಿವಾರ್ಯತೆ ಇದೆ. ಹೀಗಾಗಿ ಬಾಬಾಸಾಹೇಬ ಡಾ.ಅಂಬೇಡ್ಕರ್‌ರವರು ಕೃಷಿ ಕ್ಷೆತ್ರವನ್ನು ಕೈಗಾರಿಕ ಕ್ಷೇತ್ರವಾಗಬೇಕೆಂದು ಪ್ರಧಾನವಾಗಿ ಪ್ರತಿಪಾದಿಸಿದ್ದರೂ ಏಕೆಂದರೆ ಭಾರತ ದೇಶವು ಕೃಷಿ ಪ್ರಧಾನ ರಾಷ್ಟ್ರವಾಗಿದ್ದು ಇಲ್ಲಿಯ ಜನರ ದೈನಂದಿನ ಬದುಕು ಮತ್ತು ಚಟುವಟಿಕೆಗಳಿಗೆ ಕೃಷಿಯೇ ಬಹುಮುಖ್ಯವಾದ ಆಧಾರಸ್ತಂಭವಾಗಿದೆ.

ಕೃಷಿ ಕ್ಷೇತ್ರವನ್ನು ಸುಧಾರಿಸದೇ ಇಲ್ಲಿ ಆರ್ಥಿಕ ಸಮಾನತೆಯನ್ನು ಸಾಧಿಸಲಾಗುವುದಿಲ್ಲವೆಂಬುದು ಡಾ.ಬಿ.ಆರ್.ಅಂಬೇಡ್ಕರ್‌ರವರ ಬಲವಾದ ವಾದವಾಗಿತ್ತು. ಆದ್ದರಿಂದ ಕೃಷಿಯನ್ನು ಪ್ರಧಾನವಾಗಿ ಅವಲಂಬಿಸಿಕೊಂಡು ಅನುಸರಿಸುತ್ತಿರುವ ಬಹುತೇಕ ರಾಷ್ಟ್ರಗಳು ಅಭಿವೃದ್ಧಿಯಿಂದ ಹಿನ್ನಡೆಯನ್ನು ಸಾದಿಸಿರುವುದು ಕಂಡುಬರುತ್ತದೆ. ಹೀಗಾಗಿ ಭಾರತವು ಕೃಷಿ ವಿಚಾರದಲ್ಲಿ ಜಗತ್ತಿನ ರಾಷ್ಟ್ರಗಳಂತೆ ಭಾರತವು ಕೃಷಿ ಪ್ರಧಾನವಾದ ರಾಷ್ಟ್ರವಾಗಿದೆ. ಕೃಷಿ ಕ್ಷೇತ್ರವನ್ನು ಈ ದೇಶದ ಆರ್ಥಿಕತೆಯ ಬೆನ್ನೆಲುಬು ಎಂದೆ ಕರೆಯುತ್ತಾರೆ. ಇಲ್ಲಿನ ಕೃಷಿಯ ಸಮಸ್ಯೆಗಳು ಹಾಗೂ ಅಸಮಾನತೆಯನ್ನು ತಳಮಟ್ಟದಲ್ಲಿ ಸುಧಾರಣೆಯನ್ನು ಮಾಡದೇ ಇರುವ ದೇಶವು ಆರ್ಥಿಕ ಕ್ಷೇತ್ರದಲ್ಲಿ ಸಮಾನತೆ ಮತ್ತು ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಾಗುವುದಿಲ್ಲವೆಂದು ಬಾಬಾಸಾಹೇಬ ಡಾ.ಅಂಬೇಡ್ಕರ್‌ರವರು ನುಡಿದಿದ್ದಾರೆ. ಭಾರತದಲ್ಲಿನ ಕೃಷಿ ಪದ್ಧತಿಯನ್ನು ಹಿಂದೂಳಿದಿರುವುದಕ್ಕೆ ಮೂಲ ಪ್ರಧಾನವಾದ ಎರಡು ಪ್ರಮುಖವಾದ ಸಮಸ್ಯೆಗಳನ್ನು ಗುರುತಿಸಿದ್ದಾರೆ.

೧. ಭೂ ಒಡೆತನವು ಮೇಲ್ವರ್ಗದ ಕೆಲವೇ ಕೆಲವೂ ಜನರ ಹಿಡಿತದಲ್ಲಿತು. ಅದರಲ್ಲಿಯೂ ಪ್ರಮುಖವಾಗಿ ವೈದಿಕತೆಯಪ್ರಬಲ ಪ್ರತಿಪಾದಕರಲ್ಲಿ ಕೇಂದ್ರಿಕೃತವಾಗಿತು. ಈ ಕೃಷಿ ಭೂ ಒಡೆತನಕ್ಕೆ ಸಂಬಂಧಿಸಿದಂತೆ ಸೃಷ್ಟಿಗೊಂಡಿದ್ದ ಇನಾಂಧಾರಿ, ಮಹಲ್ದಾರಿ, ಜಹಗಿರ್‌ದಾರ, ಜಮೀನ್ದಾರಿ ಹಾಗೂ ಜೋಡಿದ್ದಾರ್ ಪದ್ಧತಿಗಳನ್ನು ಕಟ್ಟು ನಿಟ್ಟಾಗಿ ಪಾಲಿಸಬೇಕಾಗಿತ್ತು. ಇದು ಪ್ರಮುಖ ಕಾರಣವಾಗಿತ್ತು.
೨. ಹಿಂದೂಳಿದ ಜಾತಿಗಳು ಹಾಗೂ ಶೋಷಿತ ಸಮುದಾಯಗಳು ಬಹುಮಟ್ಟಿಗೆ ಭೂ ರಹಿತ ಕೃಷಿ ಕಾರ್ಮಿಕರಾಗಿ ಕಡುಬಡತನವನ್ನು ಎದುರಿಸುತ್ತಿವೆ. ಇದರಿಂದಾಗಿಯೇ ಭೂ ಮಾಲೀಕರು ಮತ್ತು ಕೃಷಿ ಕಾರ್ಮಿಕ ಜನವರ್ಗವು ಸೃಷ್ಟಿಗೊಂಡಿದೆ. ಹೀಗಾಗಿ ಭೂ ಮಾಲೀಕರು ಅಥವಾ ಜಮೀನ್ದಾರು, ಭೂಮಿ ಇಲ್ಲದ ಕೃಷಿ ಕಾರ್ಮಿಕರಿಗೆ ಶೋಷಣೆ ಮಾಡಲಾಗಿದೆ. ಈ ಕಾರಣಗಳಿಂದಾಗಿ ಭಾರತೀಯ ಕೃಷಿ ಕ್ಷೇತ್ರದಲ್ಲಿ ದಕ್ಷತೆ ಹಾಗೂ ಉತ್ಪತ್ತಿ ದರಗಳು ಕೂಗುತ್ತಾ ಬಂದಿವೆ. ಆದ್ದರಿಂದ ಈ ಶೋಷಣಾ ವ್ಯವಸ್ಥೆಯನ್ನು ಬುಡ ಸಹಿತ ಕಿತ್ತು ಹಾಕಲು ಡಾ.ಬಿ.ಆರ್.ಅಂಬೇಡ್ಕರ್‌ರವರು ಒಬ್ಬ ಆರ್ಥಿಕ ತಜ್ಞರಾಗಿ ಕೃಷಿ ಅಸಮಾನತೆಯ ವಿಚಾರವನ್ನು ಪ್ರತಿಯೊಂದು ಹಂತದಲ್ಲಿಯೂ ಪ್ರತಿಪಾದಿಸುತ್ತಾ ಅದನ್ನು ಸರಿಪಡಿಸಲು ಬ್ರಿಟಿಷರ ವಿರುದ್ಧ ಪ್ರಮುಖವಾದ ಬೇಡಿಕೆಗಳನ್ನು ಇಡುವುದರ ಮೂಲಕ ಪ್ರತಿಭಟನೆ ಮಾಡಿದ್ದಾರೆ. ಇವರು ಭೂಮಿಯನ್ನು ರಾಷ್ಟ್ರೀಕರಣವಾಗಬೇಕು ಕೃಷಿ ಕೂಲಿಕಾರ್ಮಿಕರನ್ನು ಸಮಾನತೆಯ ತತ್ವದ ಮೇಲೆ ಭೂಮಿ ಹಂಚಬೇಕು ಮತ್ತು ಈ ಕೃಷಿಯನ್ನು ಕೈಗಾರಿಕಾ ಕ್ಷೇತ್ರವಾಗಿ ಮಾರ್ಪಡಿಸಬೇಕು ಹಾಗೆ ಕೃಷಿ ಕೆಲಸಗಾರರನ್ನು ಕಾರ್ಮಿಕರು ಎಂದು ಉದ್ಯೋಗ ನೀಡಬೇಕೆಂದು ಮತ್ತು ಕೃಷಿ ಕಾರ್ಮಿಕರಿಗೆ ಬಿತ್ತನೆ ಮಾಡಲು ಬೀಜ, ರಸಗೊಬ್ಬರ ಹಾಗೂ ಸರಕಾರಿ ಕೃಷಿ ಸಾಲ ನೆರವು ನೀಡಬೇಕೆಂದು ಡಾ.ಬಿ.ಆರ್.ಅಂಬೇಡ್ಕರ್‌ರವರು ಬ್ರಿಟಿಷ ಸರಕಾರದ ಮುಂದೆ ತಮ್ಮ ಬೇಡಿಕೆಗಳನ್ನು ಇಟ್ಟಿದ್ದರು. ಹೀಗಾಗಿ ಈ ದೇಶದ ಅಭಿವೃದ್ದಿಯಾಗಲು ಸಾಧ್ಯವೆಂದು ದೃಢವಾದ ನಂಬಿಕೆಯಾಗಿತ್ತು.

ಭಾರತೀಯ ಸಾಮಾಜಿಕ ವ್ಯವಸ್ಥೆಯನ್ನು ಸೂಕ್ಷ್ಮವಾಗಿ ಅರಿತಿದ್ದರಿಂದ, ಸಮಾಜದಲ್ಲಿ ಉದ್ಭವಿಸುವ ಪ್ರತಿಯೊಂದು ಸಮಸ್ಯೆಗೂ ಮೂಲ ಪರಿಹಾರವನ್ನು ಕಂಡುಕೊಳ್ಳಬೇಕಾದರೆ ಅಥವಾ ಈ ಅಸಮಾನತೆಯ ಸಾಮಾಜಿಕ ವ್ಯವಸ್ಥೆಯನ್ನು ಬುಡಸಹಿತ ಕಿತ್ತು ಹಾಕಬೇಕಾದರೆ ಪ್ರಮುಖವಾಗಿ ರಾಜಕೀಯ ಹಾಗೂ ಆರ್ಥಿಕ ಕ್ಷೇತ್ರವನ್ನು ಪ್ರಬಲವಾಗಬೇಕೆಂದು ಬಾಬಾಸಾಹೇಬ ಡಾ.ಅಂಬೇಡ್ಕರ್‌ರವರು ಕೃಷಿ ಕ್ಷೇತ್ರದ ಬದಲಾವಣೆಗೆ ಹಾಗೂ ಪರಿವರ್ತನೆಗಾಗಿ ಕಂಡುಕೊಂಡಿದ ಸತ್ಯ ಸುಧಾರಣೆಯ ಮಾರ್ಗಗಳನ್ನು ಸೂಚಿಸಿದ್ದಾರೆ.

೧. ಕೃಷಿಯನ್ನು ಸರಕಾರ ಪ್ರಧಾನವಾಗಿ ಕೈಗಾರಿಕೆ ಎಂದು ಪರಿಗಣಿಸಬೇಕು ಹಾಗೂ ಈ ಕೃಷಿ ಕ್ಷೇತ್ರಕ್ಕೆ ಅಗತ್ಯವಾಗಿ ಬೇಕಾಗಿರುವ ಮೂಲ ನೂತನ ಸಲಕರಣೆಗಳು ಹಾಗೂ ವಿಮೆಯನ್ನು ಸರಕಾರವೇ ಒದಗಿಸಿಕೊಡಬೇಕು.
೨. ಭೂ ಮಾಲೀಕರಲ್ಲಿದ್ದ ಆಸ್ತಿಯನ್ನು ಸರಕಾರವು ತನ್ನ ವಶಕ್ಕೆ ತೆಗೆದುಕೊಳ್ಳಬೇಕು ಅದನ್ನು ಸಂಪೂರ್ಣವಾಗಿ ಭೂಮಿಯೂ ರಾಷ್ಟ್ರೀಕರಣಗೊಳಿಸಬೇಕು.
೩. ಭೂಮಾಲೀಕರಿಂದ ವಶಪಡಿಸಿಕೊಂಡ ಭೂಮಿಯನ್ನು ಅಥವಾ ರಾಷ್ಟ್ರೀಕರಣಗೊಳಿಸದ ಭೂಮಿಯೂ ಗ್ರಾಮೀಣ ಪ್ರದೇಶದಲ್ಲಿನ ಯಾವುದೇ ಜಾತಿ, ವರ್ಗ ಪಂಥಗಳನ್ನು ಬಿಟ್ಟು ಎಲ್ಲಾ ವರ್ಗದ ಭೂರಹಿತ ಕೃಷಿಕಾರ್ಮಿಕರಿಗೆ ಸಮಾನತೆಯ ತತ್ವದಡಿಯಲ್ಲಿ ಸಮಾನವಾಗಿ ಭೂಮಿ ಹಂಚಬೇಕು ಮತ್ತು ಸಮೂದಾಯಿಕ ಬೇಸಾಯಿ ಪದ್ಧತಿಯನ್ನು ಕೈಗೊಳ್ಳಲು ಸರ್ಕಾರವೇ ಸೂಕ್ತ ಸಲಹೆ ಮತ್ತು ಮಾರ್ಗದರ್ಶನ ನೀಡುವುದರ ಜೊತೆಗೆ ಕೃಷಿ ಕಾರ್ಮಿಕರಿಗೆ ತಾಂತ್ರಿಕತೆಯ ಜ್ಞಾನ ಕೃಷಿಗೆ ಸಂಬಂಧಿಸಿದ ಶಿಬಿರಗಳನ್ನು ಸರಕಾರವೇ ಆಯೋಜಿಸಿ ಭೂಮಾಲೀಕರಿಗೂ ಮತ್ತು ಭೂರಹಿತ ಕೃಷಿಕರಲ್ಲಿ ಅಸಮಾನತೆಯ ಭೇದ ಅಳಿಸಿ ಹಾಕಿ ಎಲ್ಲರೂ ಸಮಾನರು ಎಂಬಂಥ ಭಾವನೆಯೂ ಮೂಡಿಸಬೇಕು.
೪. ಸಮೂದಾಯಿಕ ಬೇಸಾಯಕ್ಕೆ ಬೇಕಾದ ಎಲ್ಲಾ ಮೂಲ ನೆರವನ್ನು ಸರಕಾರವೇ ನೀಡಬೇಕು ಪ್ರಮುಖವಾದ ಹಣಕಾಸಿನ ನೆರವು ಯೋಗ್ಯವಾದ, ಪಶುಗಳು, ಗುಣಮಟ್ಟ ಮತ್ತು ಹೆಚ್ಚು ಇಳುವರಿ ನೀಡುವಂತೆ ಬೀತ್ತನೆ ಬೀಜ ಕೃಷಿಗೆ ಬೇಕಾದ ಸಾಧನ ಸಲಕರಣೆಗಳನ್ನು ಸರಕಾರವೇ ನೇರವಾಗಿ ನೀಡಬೇಕು.
೫. ಸಮೂದಾಯಿಕ ಕೃಷಿ ಕೇಂದ್ರ ಸಂಘಟನೆ ಮತ್ತು ವ್ಯವಸ್ಥಾಪನೆಗಾಗಿ ಸರಕಾರಕ್ಕೆ ಕೃಷಿ ಉತ್ಪನ್ನದ ಮೇಲೆ ವಿವಿಧ ಬಗೆಯ ಶುಲ್ಕ ವಿಧಿಸುವ ಹಕ್ಕು ನೀಡಬೇಕು.
೬. ಸಂವಿಧನ ಜಾರಿಗೆ ಬಂದು ಹತ್ತು ವರ್ಷಗಳೊಳಗಾಗಿ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕು ಅಥವಾ ಜಾರಿ ಮಾಡಬೇಕು.

ಒಟ್ಟಾರೆಯಾಗಿ ಈ ದೇಶದ ಅಸಮಾನತೆಯ ವ್ಯವಸ್ಥೆಯನ್ನು ತೊಡೆದು ಹಾಕಬೇಕಾದರೆ ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ಎನ್ನುವಂತೆ ಈ ದೇಶದ ಪ್ರತಿಯೊಬ್ಬ ಪ್ರಜೆಯು ಸಮಾನವಾಗಿ ಆಸ್ತಿಯನ್ನು ಹೊಂದಿರಬೇಕು. ಆಗ ಮಾತ್ರ ಈ ದೇಶದ ಅಭಿವೃದ್ಧಿಗೆ ಪೂರಕವಾಗುತ್ತದೆ. ಮತ್ತು ಅಸಮಾನತೆಯನ್ನು ಬುಡಸಹಿತ ನಾಶಮಾಡಬೇಕಾದರೆ ಆರ್ಥಿಕ ಮತ್ತು ರಾಜಕೀಯ ಅಭಿವೃದ್ದಿಯಿಂದಲೇ ಸಾಧ್ಯವೆಂದು ಮನಗಂಡಿದರು. ಈ ದೇಶದ ಭೂಮಿ ಅಸಮಾನ ಹಂಚಿಕೆಯಾಗಿದೆ. ಅದು ಕೆಲವೇ ಕೆಲವೂ ಜನರ ಸೊತ್ತಾಗಿದೆ. ಆದ್ದರಿಂದ ಅಸಮಾನ ಹಂಚಿಕೆಯಾಗಿರುವ ಭೂಮಿಯನ್ನು ಸರಕಾರವು ತನ್ನ ವಶಕ್ಕೆ ತೆಗೆದುಕೊಂಡು ಅದನ್ನು ರಾಷ್ಟ್ರೀಕರಣಗೊಳಿಸಬೇಕು ಮತ್ತು ಕೃಷಿ ಕ್ಷೇತ್ರವನ್ನು ಕೈಗಾರಿಕಾ ಕ್ಷೇತ್ರವಾಗಬೇಕು. ಕೃಷಿ ರೈತರನ್ನು ಕಾರ್ಮಿಕರೆಂದು ಉದ್ಯೋಗ ನೀಡಬೇಕು ಆಗ ಈ ದೇಶದ ಅಭಿವೃದ್ದಿ ಹಾಗೂ ಸಮೃದ್ಧವಾಗಿ ಬೆಳೆಯುತ್ತದೆ ಎಂದು ಡಾ.ಬಿ.ಆರ್.ಅಂಬೇಡ್ಕರ್‌ರವರು ಈ ದೇಶದ ಆರ್ಥಿಕ ವ್ಯವಸ್ಥೆಯ ಬಗ್ಗೆ ಸೂಕ್ಷ್ಮವಾಗಿ ಅರಿತುಕೊಂಡಿದ್ದಾರೆ. ಇಲ್ಲಿ

ಬಹುಜನರು ಅಥವಾ ಬಹು ಸಂಖ್ಯೆ ಜನರು ಕೃಷಿಯನ್ನೆ ಅವಲಂಭಿಸಿದ್ದಾರೆ. ಆದ್ದರಿಂದ ಕೃಷಿಗೆ ಸಂಬಂಧಿಸಿದ ಅನೇಕ ಹೋರಾಟ ಪ್ರತಿಭಟನೆ ಮಾಡುವುದರ ಮೂಲಕ ಹಲವಾರು ಯೋಜನೆಗಳನ್ನು ಜಾರಿಗೆ ತರಬೇಕೆಂದು ಬ್ರೀಟಿಷ ಸರಕಾರದ ಮುಂದೆ ಅನೇಕ ಬೇಡಿಕೆಗಳು ಇಟ್ಟಿದ್ದಾರೆ. ಹೀಗಾಗಿ ಡಾ. ಬಿ. ಆರ್. ಅಂಬೇಡ್ಕರ್‌ರವರು ಕೃಷಿ ಕ್ಷೇತ್ರಕ್ಕೆ ಬಹುದೊಡ್ಡದಾದ ಸಲಹೆ ಮತ್ತು ಕೊಡುಗೆಯನ್ನು ಕೊಟ್ಟಿದ್ದಾರೆ. ಈ ಕ್ಷೇತ್ರದ ಅಭಿವೃದ್ಧಿಗೆ ತನ್ನದೆಯಾದ ಕೊಡುಗೆಯನ್ನು ನೀಡಿ ವಿಶ್ವದ ಏಕೈಕ ಆರ್ಥಿಕ ಚಿಂತಕ ಡಾಬಿ.ಆರ್.ಅಂಬೇಡ್ಕರ್‌ರವರಾಗಿದ್ದಾರೆ.